## ಮಧ್ಯಂತರ ಅರ್ಜಿ ನಂ. 7 ರ ಮೇಲೆ ಆದೇಶ

1. ಅರ್ಜಿದಾರ/ವಾದಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ವಾದಪತ್ರದಲ್ಲಿ ತಿದ್ದುಪಡಿ ಕೇಳಿರುತ್ತಾರೆ. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ಗಣಕಯಂತ್ರದ ದೋಷದಿಂದಾಗಿ ತಪ್ಪಾಗಿ ನಮೂದಿಸಿದ ವಿಷಯವನ್ನು ತೆಗೆದು ಹಾಕಿ ಸರಿಪಡಿಸಲು ಅವಕಾಶವನ್ನು ಕೇಳಿರುತ್ತಾರೆ. ಸದರಿ ತಿದ್ದುಪಡಿ ಪ್ರತಿವಾದಿಯರಿಗೆ ಯಾವುದೇ ರೀತಿಯ ತೊಂದರೆ ಉಂಟಾಗಿರುವುದಿಲ್ಲ ಹಾಗೂ ದಾವೆಯಲ್ಲಿಯ ವಿವಾದ್ಯವನ್ನು ನಿರ್ಧರಿಸಲು ಸದರಿ ತಿದ್ದುಪಡಿಯ ಅವಶ್ಯಕತೆ ಇರುತ್ತದೆಂದು ತಿಳಿಸಿರುತ್ತಾರೆ.

2. ಸದರಿ ಅರ್ಜಿಗೆ ಪ್ರತಿವಾದಿಯ ಪರ ತಕರಾರು ಸಲ್ಲಿಸಿ ಪ್ರತಿವಾದ ಪತ್ರದಲ್ಲಿ ತಿಳಿಸಿದ ನಂತರ ವಾದಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ್ದು, ಒಂದು ವೇಳೆ ತಿದ್ದುಪಡಿಗೆ ಅವಕಾಶ ನೀಡಿದರೆ, ದಾವೆಯ ಸ್ವರೂಪವೇ ಬದಲಾಗುವ ಸಾಧ್ಯತೆ ಇರುತ್ತದೆ. ಕಾರಣ ಅರ್ಜಿ ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

3. ಎರಡು ಕಡೆ ವಾದವನ್ನು ಆಲಿಸಿದ ನಂತರ , ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ........

## ಅಂಶಗಳು

1. ಮಧ್ಯಂತರ ಅರ್ಜಿ ನಂ. 7 ರಲ್ಲಿ ಕೇಳಿದ ಪರಿಹಾರ ಪಡೆಯಲು ವಾದಿಯು ಅರ್ಹರಿರುತ್ತಾರೆಯೇ?
2. ಯಾವ ಆದೇಶ ?

**4.** ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ಸಕಾರಾತ್ಮಕ
ಅಂಶ ನಂ. 2: ಅಂತಿಮ ಆದೇಶ
ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

## ಕಾರಣಗಳು

**5.** **ಅಂಶ ನಂ.1**:- ದಾವಾಸ್ತಿ ಕುರಿತಾಗಿ ಘೋಷಣೆ ಕೇಳಿ ವಾದಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ದಾವೆಯಲ್ಲಿ ಪಿ.ಡಬ್ಲ್ಯೂ-1 ರವರ ಪಾಟೀಸವಾಲಿಗೆ ನೇಮಿಸಿದಾಗ ಪ್ರಾಥಮಿಕ ವಿವಾದಾಂಶಗಳ ಹಾಗೂ ವಾದಪತ್ರವನ್ನು ತಿರಸ್ಕರಿಸುವ ಕುರಿತಾಗಿ ಪ್ರತಿವಾದಿಯು ಅರ್ಜಿಯನ್ನು ಸಲ್ಲಿಸಿದ್ದು, ತದನಂತರ ವಾದಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**6.** ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ-VI ನಿಯಮ-17 ರಡಿಯಲ್ಲಿ ದಾವೆಯಲ್ಲಿ ವಿಚಾರಣೆ ಪ್ರಾರಂಭವಾಗುವ ಪೂರ್ವದ ಯಾವುದೇ ಹಂತದಲ್ಲಿ ತಿದ್ದುಪಡಿಗೆ ಅವಕಾಶವಿದ್ದು, ಯುಕ್ತ ಎಚ್ಚರಿಕೆ ವಹಿಸಿದಾಗ್ಯೂ,

ಈ ಮೊದಲು ತಿದ್ದುಪಡಿಗೆ ಅವಕಾಶವಿರಲಿಲ್ಲ ಎಂಬುವುದನ್ನು ತೋರಿಸದ ಹೊರತು ತದನಂತರ ಸಲ್ಲಿಸಿದ ತಿದ್ದುಪಡಿ ಅರ್ಜಿಯನ್ನು ಪರಿಗಣಿಸಲಾಗದೆಂದು ಸ್ಪಷ್ಟಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಅರ್ಜಿಯಲ್ಲಿ ಕೇಳಿದ ತಿದ್ದುಪಡಿ ವಿಷಯವನ್ನು ಅವಲೋಕಿಸಿದಾಗ, ವಾದಪತ್ರದ ಕಂಡಿಕೆ ಸಂಖ್ಯೆ-4 ರಲ್ಲಿ 'Release deed' ಎಂಬ ಬರೆದ ಸ್ಥಳದಲ್ಲಿ 'Sale deed' ಎಂದು ಬರೆಯಲು ಹಾಗೂ ಪ್ರಾರ್ಥನೆ ನಂ.a ರಲ್ಲಿ 'ಪ್ರತಿವಾದಿ' ಎಂದು ಬರೆದ ಸ್ಥಳದಲ್ಲಿ 'ವಾದಿ' ಎಂದು ನಮೂದಿಸಲು ವಿನಂತಿಸಿರುತ್ತಾರೆ. ಸದರಿ ವಾದಪತ್ರದಲ್ಲಾದ ತಪ್ಪು ನಮೂದನೆ ಗಣಕಯಂತ್ರದ ದೋಷದಿಂದ ಆಗಿರುತ್ತದೆಂದು ವಾದಿ ತಿಳಿಸಿರುತ್ತಾರೆ. ವಾದಿ ಕೇಳಿದ ತಿದ್ದುಪಡಿ ಪುರಸ್ಕರಿಸಿರುವುದರಿಂದ ಪಕ್ಷಗಾರರ ನಡುವೆ ಇರುವ ವಿವಾದ್ಯವನ್ನು ಪರಿಣಾಮಕಾರಿಯಾಗಿ ನಿರ್ಧರಿಸಲು ಅವಕಾಶವಿರುತ್ತದೆ. ಕಾರಣ ಸದರಿ ತಿದ್ದುಪಡಿಯಿಂದ ದಾವೆಯ ಸ್ವರೂಪದಲ್ಲಿ ಬದಲಾವಣೆಯಾಗುವುದಿಲ್ಲ. ಸದರಿ ತಿದ್ದುಪಡಿ ನಂತರ ವಾದಿಗೆ ಅದನ್ನು ಪ್ರಶ್ನಿಸುವ ಅವಕಾಶವಿರುವುದರಿಂದ ತದನಂತರ ಅರ್ಜಿ ಸಲ್ಲಿಸಿರುತ್ತಾರೆ ಅಂಬುವ ಮಾತ್ರಕ್ಕೆ ವಾದಿ ಮಾಗಣೆಯನ್ನು ತಿರಸ್ಕರಿಸಲಾಗದು. ಆದರೆ ಅರ್ಜಿಯನ್ನು ತಡವಾಗಿ ಸಲ್ಲಿಸಿರುವುದರಿಂದ ಖರ್ಚಿನ ಸಹಿತ ಪುರಸ್ಕರಿಸುವುದರಿಂದ ಪ್ರತಿವಾದಿಯ ಹಿತವನ್ನು ಸಹ

ಕಾಯ್ದುಂತಾಗುತ್ತದೆ. ಕಾರಣ ಅಂಶ ನಂ. 1 ಕ್ಕೆ **"ಸಕಾರಾತ್ಮಕ"** ಎಂದು ಉತ್ತರಿಸಿದ್ದೇನೆ.

**7. ಅಂಶ ನಂ.2**ಃ ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

**ಆದೇಶ**

ಮಧ್ಯಂತರ ಅರ್ಜಿ ನಂ. 7 ನ್ನು ರೂ. 200/- ಖರ್ಚಿನ ಮೇರೆಗೆ ಪುರಸ್ಕರಿಸಲಾಗಿದೆ.

ವಾದಪತ್ರದ ತಿದ್ದುಪಡಿಗಾಗಿ ಪ್ರಕರಣವನ್ನು 03-01-2023 ರಂದು ಕರೆಯಿರಿ.

Sd/-

**ದಿವಾಣಿ ನ್ಯಾಯಾಲಯ , ಅಂಕೋಲಾ**